ಎಂದೂ ಯೋಚಿಸಿರುತ್ತಾರೆ. 2009–10ನೇ ಆರ್ಥಿಕ ವರ್ಷದ ಮೊದಲನೆ ತ್ರೈಮಾಸಿಕದಲ್ಲಿ ಉದ್ಯಮವು ಏರುಮುಖವನ್ನು ಕಾಣುವ ಸಂಭವವಿದೆ. ಇನ್ಫೋಸಿಸ್, ವಿಪ್ರೋ, ಟಿಸಿಎಸ್, ಕಗ್ನಿಜಂಟ್‌ಗಳಂತಹ ಕಂಪನಿಗಳು ಹಂತ ಹಂತವಾಗಿ ಉದ್ಯೋಗ ನೀಡುತ್ತಲಿದೆ.

ಇನ್ಫೋಸಿಸ್ ಸಂಸ್ಥೆಯ ಮೊದಲ ತ್ರೈಮಾಸಿಕದ ಫಲಿತಾಂಶಗಳು ನಿವ್ವಳ ಲಾಭದಲ್ಲಿ ಶೇಕಡ 17.3 ರಷ್ಟು ಬೆಳವಣಿಗೆ ದರವನ್ನು ಕಂಡಿದೆ.

ಈ ಆರ್ಥಿಕ ಹಿಂಜರಿತವನ್ನು ಸರಿದೂಗಿಸಲು ಸರ್ಕಾರವು 2ನೇ ಮತ್ತು 3ನೇ ದರ್ಜೆ ನಗರಗಳಾದ ಶಿವಮೊಗ್ಗ, ಮಂಗಳೂರು ಹಾಗೂ ಮೈಸೂರಿನಲ್ಲಿ ಕಿಯೋನಿಕ್ಸ್ ವತಿಯಿಂದ ಪಿಪಿಪಿ ಆಧಾರದ ಮೇಲೆ ಐಟಿ ಪಾರ್ಕನ್ನು ಸ್ಥಾಪಿಸಿ ಐಟಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ಇದರಿಂದಾಗಿ ಸುಮಾರು 1 ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಬಹುದಾಗಿರುತ್ತದೆ. ಇದಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ತಾಲ್ಲೂಕು / ಹೋಬಳಿಯಲ್ಲಿ ಗ್ರಾಮೀಣ ಬಿ.ಪಿ.ಓ ಯೋಜನೆಯನ್ನು 2009–10ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಪ್ರತಿ ಬಿ.ಪಿ.ಓ ಕೇಂದ್ರಗಳಲ್ಲಿ ಕನಿಷ್ಠ ನೂರು ಜನಕ್ಕೆ ಉದ್ಯೋಗ ಕಲ್ಪಿಸಲಾಗುತ್ತದೆ.

ಸಚಿವ ಸಂಪುಟವು ಇತ್ತೀಚೆಗಷ್ಟೆ ಪರಿಷ್ಕೃತ ಜೈವಿಕ ತಂತ್ರಜ್ಞಾನ ಪಾಲಿಸಿ–IIನ್ನು ಅನುಮೋದಿಸಿದ್ದು, ಇದರಲ್ಲಿ ಬಯೋಟೆಕ್ನಾಲಜಿಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ರಿಯಾಯಿತಿಗಳ ಮತ್ತು ಉತ್ತೇಜನಗಳ ಪ್ಯಾಕೇಜ್ ಅನ್ನು ಘೋಷಿಸಲಾಗಿದೆ.

ಜೀವಶಾಸ್ತ್ರ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಜ್ಞಾನ ಹೊಂದಲು (ಐಟಿ ಆದಾರಿತ) ಪ್ರೋತ್ಸಾಹಿಸುವ ದೃಷ್ಟಿಯಿಂದ, ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸಲು ಬಿಟಿ ಫಿನಿಷಿಂಗ್ ಶಾಲೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

2ನೇ ಹಾಗೂ 3ನೇ ಹಂತ ನಗರಗಳಲ್ಲಿ 5 ಬಯೋಟೆಕ್ ಪಾರ್ಕ್‌ಗಳನ್ನು ಸ್ಥಾಪಿಸಲೂ ಸಹ ಉದ್ದೇಶಿಸಲಾಗಿದೆ.

984 ಶ್ರೀ ನಾಗೇಂದ್ರಬಿ. : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ಪಟ್ಟಣದಲ್ಲಿ ಬಸ್ ನಿಲ್ದಾಣ ನಿಮಾಣ ಕಾರ್ಯಕ್ಕಾಗಿ ಬಿಡುಗಡೆಯಾದ ಮೊತ್ತ ಎಷ್ಟು;

ಆ) ಈ ಮೊತ್ತವು ಬಸ್ ನಿಲ್ದಾಣ ನಿರ್ಮಿಸಲು ಸಾಕಾಗುತ್ತಿಲ್ಲದಿರುವುದು ಸರ್ಕಾರಕ್ಕೆ ತಿಳಿದಿದೆಯೇ;

9-1/3

ಇ) ಹಾಗಿದ್ದಲ್ಲಿ ಈ ಬಗ್ಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಕ್ರಮ ಕೈಗೊಳ್ಳುವುದೇ;

ಈ) ಈ ತಾಲ್ಲೂಕಿಗೆ ಹೆಚ್ಚಿನ ಬಸ್ ಸೌಕರ್ಯವನ್ನು ಕಲ್ಪಿಸುವ ಬಗ್ಗೆ ಚಿಂತನೆ ನಡೆಸಿದೆಯೇ; (ವಿವರ ನೀಡುವುದು)?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) 2008–09 ಹಾಗೂ 2009–10ರಲ್ಲಿ ಸದರಿ ಬಸ್ ನಿಲ್ದಾಣವನ್ನು ಅಭಿವೃದ್ಧಿ ಪಡಿಸುವುದಕ್ಕೆ ರೂ.20.00 ಲಕ್ಷ ಹಾಗೂ ರೂ.40.00 ಲಕ್ಷಗಳನ್ನು ಕ್ರಮವಾಗಿ ಮುಚ್ಚಳ ಹೊದಿಕೆ ಅಳವಡಿಸುವುದಕ್ಕೆ ಹಾಗೂ ಆವರಣಕ್ಕೆ ಕಾಂಕ್ರೀಟ್ ಅಳವಡಿಸುವುದಕ್ಕೆ ವಿಶೇಷ ಅಭಿವೃದ್ಧಿ ಯೋಜನೆ ಅನುದಾನದಡಿಯಲ್ಲಿ ಮಂಜೂರು ಮಾಡಲಾಗಿರುತ್ತದೆ.

ಆ) ಸದ್ಯಕ್ಕೆ ತೆಗೆದುಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗೆ ಈ ಮೊತ್ತವನ್ನು ಸರಿದೂಗಿಸಬಹುದು. ಆದರೆ ಇನ್ನು ಹೆಚ್ಚಿನ ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ಹಣ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಹೆಚ್ಚಿನ ಅನುದಾನ ಅವಶ್ಯವಿದ್ದಲ್ಲಿ ಮಂಜೂರು ಮಾಡುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಕೂಡ್ಲಿಗಿ ತಾಲ್ಲೂಕಿಗೆ ನೂಜ್–2007ರಿಂದ ಜೂನ್ 2006ರವರೆಗೆ ಒಟ್ಟು 42 ಹೊಸ ಬಸ್ಸುಗಳನ್ನು ಒದಗಿಸಲಾಗಿದೆ.

ಪ್ರಸಕ್ತ ವರ್ಷದಲ್ಲಿ ಪ್ರಯಾಣಿಕರ ಬೇಡಿಕೆ ಇರುವ ಪ್ರಮುಖ ಮಾರ್ಗಗಳಲ್ಲಿ ಇನ್ನೂ ಹೆಚ್ಚಿನ ವಾಹನಗಳನ್ನು ಹಾಕುವ ಯೋಜನೆ ಇದೆ.

873 ಶ್ರೀ ನಾಗೇಂದ್ರ ಬಿ (ಕೂಡ್ಲಿಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಖಿಗೆ ವಿವಿಧ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಸ್ತೆ, ಸೇತುವೆ ಮತ್ತು ಕಟ್ಟಡಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ನೀಡುವುದು (ವರ್ಷಾವಾರು);

ಆ) ಕಳೆದ ಮೂರು ವರ್ಷಗಳಿಂದ ಕೂಡ್ಲಿಗಿ ತಾಲ್ಲೂಕಿಗೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರಸ್ತೆ, ಸೇತುವೆ ಮತ್ತು ಕಟ್ಟಡಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ. ವಿವರ ನೀಡುವುದು;